**ಚಿತ್ರಾ ರಾಮಚಂದ್ರನ್**

ಕಲೆ: ವಿದ್ಯಾ ಮುರಳಿ

# ಕೊಡುಗೆ

ಸಕನಸಮುದ್ರ ಊರಲ್ಲಿಯ ಸೋಮೇ ದೇವರ ಗುಡಿ ಚಿಕ್ಕದ್ದಾಗಿದ್ದರೂ ಚೊಕ್ಕದಾಗಿತ್ತು. ವಿರೂಪಾಕ್ಷ ದೇವಾಲಯದಲ್ಲಿದ್ದಂತಹ ಕೆತ್ತನೆಗಳೋ ವರ್ಣಚಿತ್ರಗಳೋ ಸುಂದರವಾದ ಶಿಲ್ಪಿ ವಿನ್ಯಾಸಗಳೋ ಎಲ್ಲೂ ಕಂಡುಬರಲಿಲ್ಲ. ಆದರೂ ಮಲ್ಲೆಮಾಲೆ, ಬೆಳ್ಳಿಯ ನಾಗಾಭರಣ, ಹತ್ತಿಯ ವಸ್ತ್ರ ಧರಿಸಿ ಗರ್ಭಗುಡಿಯಲ್ಲಿ ಆಸೀನನಾಗಿದ್ದ ಸರಳ ಸುಂದರವಾದ ಸೋಮೇ ದೇವನ ದಿವ್ಯ ವಿಗ್ರಹ ಕಣ್ಮನ ಸೆಳೆಯುವಂತಿತ್ತು.

ಒಬ್ಬಿಬ್ಬರ ಹೊರತಾಗಿ ಗುಡಿಯಲ್ಲಿ ಬೇರೆ ಜನರ ಸಂದಣಿಯೇ ಇರಲಿಲ್ಲ. ಅರ್ಚಕರು ಸಂಧ್ಯಾ ಕಾಲದ ಪೂಜೆಯ ಪ್ರಯುಕ್ತ ಬಿಲ್ವಾರ್ಚನೆಯನ್ನು ಮಾಡುತ್ತಿರಲು, ಭಕ್ತಿಯಿಂದ ಕೈ ಮುಗಿದು ನೋಡುತ್ತ ನಿಂತ ಬಾಲೆಯ ಎಳೆ ಮನಸ್ಸು ಬೇಡಿಕೆಗಳಿಂದ ತುಂಬಿ ಹರಿಯುತ್ತಿತ್ತು.

'ದೇವರೇ! ಪದೇ ಪದೇ ಯುದ್ಧಕ್ಕೆ ಹೊರಡದೆ, ಒಂದೇ ಬಾರಿಗೆ ಎಲ್ಲ ಯುದ್ಧಗಳನ್ನೂ ಗೆದ್ದು ಅಪ್ಪಾಜಿಯವರು ವಿಜಯಶಾಲಿಯಾಗಿ ಹಿಂದಿರುಗಬೇಕು. ನಂತರ ಸದಾ ನಗುನಗುತ ಸುಖ ಶಾಂತಿಯಿಂದ ಶಾಶ್ವತವಾಗಿ ನಮ್ಮೊಂದಿಗಿರಬೇಕು. ಅಪ್ಪಾಜಿಯವರನ್ನು ಆಗಾಗ ಬಹುಕಾಲ ಅಗಲಿರುವುದು ಸಾಧ್ಯವಾಗುತ್ತಿಲ್ಲ. ನಮ್ಮ ಊರ ವಿರೂಪಾಕ್ಷನಲ್ಲಿ ಅನುದಿನವೂ ಬೇಡುವುದನ್ನೇ ನಿನ್ನಲ್ಲೂ ಬೇಡುತ್ತೇನೆ. ಕರುಣಿಸು ಸೋಮೇ ದೇವಾ.'

ಅರ್ಚನೆ ಮುಗಿಯಿತು. ಹಣ್ಣುಗಳ ನೈವೇದ್ಯವಾಗಿ ಮಂಗಳಾರತಿಯೂ ಆಯಿತು.

ಮಂಗಳಾರತಿಯನ್ನು ಕಣ್ಣಿಗೆ ಒತ್ತಿಕೊಂಡ ಬಾಲೆಯ ಕೈಗೆ ವಿಭೂತಿಯನ್ನು ಕೊಟ್ಟು "ಮಂಗಳವಾಗಲಿ!" ಎಂದು ಶುಭ ನುಡಿದರು ಅರ್ಚಕರು.

"ಅಯ್ಯ, ಸೋಮೇ ದೇವರಿಗೆ ಬರಿ ಹಣ್ಣಿನ ನೈವೇದ್ಯ ಸಾಕೆ? ನಾಳೆಯ ಪೂಜೆಯವರೆಗೆ ಅವರಿಗೆ ಹಸಿವಾಗದೇ ಇರುತ್ತದೆಯೇ?"

ಮುಗ್ಧ ಬಾಲೆಯ ಮುಗ್ಧ ಪ್ರಶ್ನೆ ಅರ್ಚಕರ ಮೊಗದಲ್ಲಿ ಕಿರುನಗೆಯನ್ನರಳಿಸಿತು.

"ನಮ್ಮ ಸೋಮೇ ದೇವ ಬಹಳ ಸೌಮ್ಯಮೂರ್ತಿಯಮ್ಮ. ಒಪ್ಪೊತ್ತು ಮಹಾ ನೈವೇದ್ಯ; ಉಳಿದ ಸಮಯ ಹಣ್ಣು ಕಾಯಿಯಿಂದಲೇ ತೃಪ್ತನಾಗಿ ಅನುಗ್ರಹ ಮಾಡುತ್ತಾನೆ" ಎಂದು ನಗುತ್ತಲೇ ನುಡಿದರು ಅರ್ಚಕರು.

'ಇಷ್ಟು ಪುಟ್ಟ ಹುಡುಗಿಗಿರುವ ಕಾಳಜಿ, ಭಕ್ತಿ ಈ ನಮ್ಮ ಹಳ್ಳಿಗರಿಗಿಲ್ಲವೇ' ಎಂದುಕೊಂಡರು.

"ಸೋಮೇ ದೇವರ ಮೇಲೆ ನಿನಗೆ ಅದೆಷ್ಟು ಅಕ್ಕರೆಯಮ್ಮ! ನಿನ್ನನ್ನ ಈ ಮೊದಲು ಈ ಊರಲ್ಲಿ ನಾನು ಕಂಡಿಲ್ಲವಲ್ಲ? ನೀನು ಯಾರಮ್ಮ?" ಎಂದು ವಿಚಾರಿಸಿದರು.